ಓ.ಎಸ್. ನಂ. *53/2016*

ಡಿ.ಡಬ್ಲು-*3*

ಸಾಕ್ಷಿಯನ್ನು ಇಂದು ದಿನಾಂಕಃ *12.12.2024* ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದ**

೧. ಪ್ರತಿವಾದಿ ನಂ.೧ ರವರಿಗೆ ನರೋಣಾದಲ್ಲಿ ಜಮೀನು ಇರುವುದಿಲ್ಲ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಅರ್ಧ ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಊರು ಬಿಟ್ಟು ಎಷ್ಟು ದೂರ ಇರುತ್ತದೆ ಎಂದರೆ ಸಾಕ್ಷಿಯು ಊರಿಗೆ ಹೊಂದಿಕೊಂಡು ಪೂರ್ವ ದಿಕ್ಕೆಗೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಸ.ನಂ. ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ಒಟ್ಟು ಎಷ್ಟು ಎಕರೆ ಎಷ್ಟು ಗುಂಟೆ ಜಮೀನು ಇರುತ್ತದೆ ಎಂದು

ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೂ ಅರ್ಧ ಗುಂಟೆ ಜಮೀನು ಇರುತ್ತದೆ.

೨. ಈ ದಾವೆಯು ವಾದಿ ಮತ್ತು ಪ್ರತಿವಾದಿಯರ ನಡುವೆ ಜಾಗದ ಸಲುವಾಗಿ ನಡೆದಿರುತ್ತದೆ. ದಾವಾ ಆಸ್ತಿಯ ಚೆಕಬಂದಿಯನ್ನು ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ವಾದಿಯ ಮನೆ, ಪಶ್ಚಿಮಕ್ಕೆ ಸಂಧಿ ಆದ ನಂತರ ಅಣ್ಣೆಪ್ಪ ರವರ ಮನೆ ಇರುತ್ತದೆ. ಉತ್ತರಕ್ಕೆ ಅಣ್ಣೆಪ್ಪ ರವರ ಮನೆ ಇರುತ್ತದೆ, ದಕ್ಷಿಣಕ್ಕೆ ಪೀರಪ್ಪ ರಾಗಿ ಮತ್ತು ಶ್ರೀಮಂತ ರಾಗಿ ರವರ ಮನೆ ಇರುತ್ತದೆ. ದಾವಾ ಆಸ್ತಿಯ ಉದ್ದಳತೆ ಎಷ್ಟು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು 10*15 ಫೂಟು ಶೆಡ್ ಇರುತ್ತದೆ, ಉಳಿದ ಜಾಗ ಖುಲ್ಲಾ ಇರುತ್ತದೆ ಎಂದು ನುಡಿಯುತ್ತಾರೆ. ಪೂರ್ತಿ ಜಾಗ ಎಷ್ಟು ಉದ್ದಳತೆ ಇರುತ್ತದೆ ಎಂದರೆ ಸಾಕ್ಷಿ 30*40 ಇರುತ್ತದೆ. ಸದರಿ ದಾವಾ ಆಸ್ತಿಯು ಪ್ರತಿವಾದಿ ನಂ.೧ ರವರ ತಂದೆ ಚಿದಾನಂದ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯು ಪ್ರತಿವಾದಿ ನಂ.೧ ರವರ ಅಜ್ಜ ದೇವಪ್ಪನವರ ಹೆಸರಿನಲ್ಲಿರುತ್ತದೆ. ಪ್ರತಿವಾದಿ ನಂ.೧ ಮತ್ತು ೨ ರವರು ಗುಲಬರ್ಗಾದಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಹೊಟ್ಟೆ ಉಪಜೀವನಕ್ಕಾಗಿ ಮುಂಬೈಗೆ ಹೋಗಿರುತ್ತಾರೆ, ಬಂದು ಹೋಗುವುದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.೨ ರವರ ರೇಶನ ಕಾರ್ಡ ಊರಿನಲ್ಲಿ ಇರುವುದಿಲ್ಲ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಆಧಾರ ಕಾರ್ಡ ಇರುತ್ತದೆ, ರೇಶನ ಕಾರ್ಡ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆ ಊರಲ್ಲಿ ಇರದ ಕಾರಣ ಅವರಿಗೆ ರೇಶನ ಕಾರ್ಡ, ಮತ್ತು ಆಧಾರ ಕಾರ್ಡ ಇರುವುದಿಲ್ಲ ಎಂಧರೆ ಸರಿ ಅಲ್ಲ.

೩. ಪ್ರತಿವಾದಿಯರು ನಾನು ಪರಿಚಯವಿರುತ್ತೇವೆ, ಅವರು ನನಗೆ ಯಾವುದೇ ರೀತಿಯ ಸಂಬಂಧವಿಲ್ಲ. ವಾದಿ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಯಾವ ಯಾವ ಪಂಚಾಯತ ದಾಖಲಾತಿಗಳಲ್ಲಿ ಹೆಸರು ಇದ್ದಾವೆ ಎಂದು ನೋಡಿದಿರಾ ಎಂದರೆ ಸಾಕ್ಷಿ ಇಲ್ಲ ಎಂಧು ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ನಿಮ್ಮ ಮನೆ ಎಷ್ಟು ದೂರ ಇದೆ ಎಂದರೆ ಸಾಕ್ಷಿ ಒಂದು ಸಂಧಿಯನ್ನು ಬಿಟ್ಟು ದಾವಾ ಆಸ್ತಿ ಹಿಂದೆ ನಮ್ಮ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯರು ಜಬರದಸ್ತಿಯಿಂದ ಬಂದು ದಾವಾ ಆಸ್ತಿ ನಮ್ಮದು ಎನ್ನುತ್ತಿದ್ದಾರೆ ಎಂದರೆ ಸರಿ ಅಲ್ಲ.

ದಾಖಾಲಾತಿಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ.

೪. ಪ್ರತಿವಾದಿಯರು ಜಬರಸ್ತಿಯಿಂದ ದಾವಾ ಆಸ್ತಿ ನಮ್ಮದು ಎಂದು ಹೇಳಿದ ಕಾರಣಕ್ಕಾಗಿ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಜಗಳ ಆಗಿರುತ್ತದೆ ಎಂಧರೆ ಸರಿ ಅಲ್ಲ. ಪ್ರತಿವಾದಿ ನಂ.೩ ರಿಂದ ೬ ರವರು ಚಾಸಾ-೧ ರವರಿಗೆ ಅಳಿಯನಾಗಬೇಕು. ಪ್ರತಿವಾದಿ ನಂ.೩ ರವರ ತಂಗಿಯನ್ನು ಕಿವಡೆ ಕುಟುಂಬದವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿ ನಂ.೧ ರಿಂದ ೬ ರವರು ಜಬರದಸ್ತಿಯಿಂದ ಬಂದು ದಾವಾ ಆಸ್ತಿಯನ್ನು ಕೊಡಲು ಕೇಳಿರುತ್ತಾರೆ, ಆ ಕಾರಣಕ್ಕಾಗಿ ಜಗಳ ಆಗಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ ಅಲ್ಲ. ಪ್ರತಿವಾದಿಯರು ದಾವಾ ಆಸ್ತಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂಧರೆ ಸರಿ ಅಲ್ಲ. ಪ್ರತಿವಾದಿ ನಂ.೧ ಮತ್ತು ೨ ರವರು ನಮ್ಮ ಊರಿನವರೇ ಅಲ್ಲ, ಅವರು ನಮಗೆ ಯಾವುದೇ ರೀತಿಯಾದ ಸಂಬಂಧವಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ರವರು ಹುಟ್ಟುತ್ತಾ ಕಲಬುರಗಿಯಲ್ಲಿಯೇ ಇರುತ್ತಾರೆ, ಅಲ್ಲೇ ವಾಸಿಸುತ್ತಾರೆ ಎಂಧರೆ ಸರಿ ಅಲ್ಲ. ರೇವಣಸಿದ್ದಪ್ಪನಿಗಾಗಲಿ ಅವರ ಕುಟುಂಬಕ್ಕಾಗಲಿ ಪ್ರತಿವಾದಿಯರು ಯಾವುದೇ ರೀತಿಯಾದ ಸಂಬಂಧವಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.